**ದಿನಾಂಕ 08.11.2019 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಸ್.ಬಿ.ಎಸ್. ವಕೀಲರಿಂದ**

ವಾದಿಯ ತಾಯಿಯ ಹೆಸರು ಅಕ್ಕಯಮ್ಮ. ವಾದಿಯ ಮುತ್ತಜ್ಜನ ಹೆಸರು ಬೊಮ್ಮೇಗೌಡ ಬಿನ್ ಬಸವೇಗೌಡ ಎಂದರೆ ಸರಿ. ಬೊಮ್ಮೇಗೌಡರಿಗೆ 2 ಗುಂಟೆ ಹಿಸ್ಸೆಯ ಮೂಲಕ ಬಂದಿರುವ ದಾಖಲೆಯನ್ನು ನಾನು ನೋಡಿಲ್ಲ. ಬೊಮ್ಮೇಗೌಡರ 3 ಜನ ಮಕ್ಕಳು ತನ್ನ ತಂದೆ ಬೊಮ್ಮೇಗೌಡರಿಗೆ ಬಂದಿದ್ದ 2 ಗುಂಟೆ ಆಸ್ತಿಯನ್ನು 3 ಜನ ಹಿಸ್ಸೆ ಮಾಡಿಕೊಂಡಿರುವ ದಾಖಲೆಯನ್ನು ನಾನು ನೋಡಿಲ್ಲ. ದಾವಾ ಆಸ್ತಿಯ ದಾಖಲೆಯನ್ನು ನಾನು ನೋಡಿಲ್ಲ. 1 ನೇ ಪ್ರತಿವಾದಿ ಹೇಳಿರುವ ಮಾತನ್ನು ಕೇಳಿ ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ದಾವಾ ಆಸ್ತಿಯ ನಕ್ಷೆಯನ್ನು ಮಾಡಿಸಿದ್ದಾರೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ವಾದಿ ಅನುಭೋಗದಲ್ಲಿ ಇದ್ದಾರೆ ಎಂದರೆ ಸಾಕ್ಷಿ ಇಬ್ಬರು ಸ್ವಾಧೀನದಲ್ಲಿ ಇದ್ದಾರೆ ಎಂದು ಹೇಳುತ್ತಾರೆ. ವಾದಿಯ ತಾಯಿ ಮರಣ ಹೊಂದಿದ ನಂತರ ಖಾತಾ ಬದಲಾವಣೆ ಮಾಡಿಕೊಂಡು ವಾದಿ ಸ್ವಾಧೀನಾನುಭ ಹೊಂದಿದ್ದಾರೆ ಎಂದರೆ ಸರಿಯಲ್ಲ. ವಾದಿ 2 ಗುಂಟೆಯಲ್ಲಿ ಸ್ವಾಧೀನ ಇದ್ದರೂ 1 ನೇ ಪ್ರತಿವಾದಿಯ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ.ಇ.

ಜೆಎಂಎಫ್‌ಸಿ., ಹೊಳೆನರಸೀಪುರ.